ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-1, July-August 2025, Pp. 94-103
©*IIMRD*, Mysuru

IIMRD JOURNALS

www.iimrd.com

# ತುಳಸಿ ವೇಣುಗೋಪಾಲ್ ಅವರ ಆಯ್ದ ಮುಂಬೈ ಕೇಂದ್ರಿತ ಕತೆಗಳಲ್ಲಿ ಕೊಳಗೇರಿ ಜನರ ಜೀವನ

**ನಾಗೇಂದ್ರ[1] ಮತ್ತು ಡಾ. ಬಿ. ಪ್ರಭುಸ್ವಾಮಿ[2]**
[1]ಸಂಶೋಧನಾ ವಿದ್ಯಾರ್ಥಿ, [2]ಸಹ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ, ಜೆಎಸ್‌ಎಸ್‌ಎಸ್ ಮಹಾವಿದ್ಯಾಲಯ, ಊಟಿ ರಸ್ತೆ, ಮೈಸೂರು

**ಸಾರಾಂಶ: (Abstract)**

*ಮುಂಬೈ ನಗರವು ಭಾರತದ ಬಹುದೊಡ್ಡ ಆರ್ಥಿಕ ಕೇಂದ್ರ. ಇಲ್ಲಿ ಉದ್ಯೋಗಾಕಾಶಗಳು ಹೆಚ್ಚಿರುವುದರಿಂದ ಭಾರತದ ವಿವಿಧ ಪ್ರದೇಶಗಳಿಂದ ಜನರು ತಮ್ಮ ಬದುಕು ಕಟ್ಟಿಕೊಳ್ಳಲು ಮುಂಬೈಗೆ ಬರುವುದು ಸಹಜ. ಹೀಗೆ ಹೆಚ್ಚು ಜನ ಸೇರಿದಂತೆಲ್ಲ ವಸತಿ ಸಮಸ್ಯೆ ತಲೆದೋರುವುದು ಸಹಜ. ವಲಸೆ ಮಂದಿ ತಾತ್ಕಾಲಿಕ ಶೆಡ್ಡುಗಳನ್ನು ನಗರದ ಅಕ್ಕಪಕ್ಕದ ಖಾಲಿ ಜಾಗಗಳಲ್ಲಿ ನಿರ್ಮಿಸಿ ವಾಸಿಸುತ್ತಾರೆ. ಅದುವೆ ಕೊಳಗೇರಿಗಳ ನಿರ್ಮಾಣಕ್ಕೆ ಕಾರಣವಾಗುತ್ತದೆ. ಇಂತಹ ಕೊಳಗೇರಿಗಳಲ್ಲಿಯ ಜನರ ದೈನಂದಿನ ಕಾಯಕ, ಅವರ ಜೀವನಶೈಲಿಯ ಹತ್ತು ಹಲವು ವಿಭಿನ್ನ ನೋಟಗಳನ್ನು ತುಳಸಿ ವೇಣುಗೋಪಾಲ್ ಅವರು ತಮ್ಮ ಆಯ್ದ ಮುಂಬೈ ಕೇಂದ್ರಿತ ಕಥೆಗಳಲ್ಲಿ ಕಟ್ಟಿಕೊಡುವ ಮೂಲಕ ಸಮಾಜದ ಅಂಚಿನ ಜನರ ಬದುಕು ಭಾವನೆಗಳನ್ನು ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ.*

**ಮುಖ್ಯಪದಗಳು (Keywords):** ಕೊಂಡಸ್ಕರವಾಡಿ, ಬಚ್ಚುಬಾಯಿ, ಆತೀಶ್‌ಭಾಜಿ, ಪಾಂಡು, ಹೊಂಚು, ಪುಂಡಲೀಕ, ಜೀವನ ಪ್ರೀತಿ, ಅನಿವಾರ್ಯತೆ, ಮನುಷ್ಯ ಸ್ವತಂತ್ರ, ಸಬಲ್ಟ್ರನ್, ನೈತಿಕತೆ.

## ಪೀಠಿಕೆ

ಪ್ರಾಗೈತಿಹಾಸಿಕ ಕಾಲದಿಂದಲೂ ವಲಸೆ ಎಂಬುದು ಮಾನವನ ಬದುಕಿನ ಒಂದು ಭಾಗವಾಗಿದೆ. ಇಡೀ ಮಾನವ ಜನಾಂಗವೇ ಆಹಾರ, ನೀರಿಗಾಗಿ ಒಂದು ಭೂಖಂಡದಿಂದ ಮತ್ತೊಂದು ಭೂಖಂಡಕ್ಕೆ ವಲಸೆ ಬಂದಿದೆ. ಯಾವುದೇ ಭೌಗೋಳಿಕ ಗಡಿರೇಖೆಗಳು ಇರದ ಅಂದು, ತಮ್ಮ ಜೀವನ ನಿರ್ವಹಣೆಗೆ ಸೂಕ್ತ ನೆಲೆ ಕಂಡುಕೊಳ್ಳುವುದೇ ಅವರ ಬದುಕಿನ ಬಹುಮುಖ್ಯ ಗುರಿಯಾಗಿತ್ತು. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ನಡೆದಾಗ, ಜನರ ಜೊತೆಗೆ ಅವರ ಆಚಾರ ವಿಚಾರ, ಕೃಷಿ ಪದ್ಧತಿ, ಆಹಾರ ಪದ್ಧತಿ, ಉಡುಪು ಇತ್ಯಾದಿ ಸಾಂಸ್ಕೃತಿಕ ಸಂಗತಿಗಳು ಸಹ ಅವರೊಂದಿಗೆ ವಲಸೆ ಬರುತ್ತವೆ. ಹೀಗೆ ವಲಸೆ ಬಂದ ಜನರ ಸಂಸ್ಕೃತಿ ಸ್ಥಳೀಯ ಸಂಸ್ಕೃತಿಯೊಡನೆ ಕೊಡು–ಕೊಳ್ಳುವ ಪ್ರಕ್ರಿಯೆ ನಡೆದು, ಎರಡು ಸಂಸ್ಕೃತಿಗಳು ರೂಪಾಂತರಗೊಂಡಿರುತ್ತವೆ. ಹೀಗೆ ವಲಸೆಗೆ ಭೌತಿಕ ಆಯಾಮವಲ್ಲದೆ ಸಾಂಸ್ಕೃತಿಕ

*Please cite this article as:* ನಾಗೇಂದ್ರ. ಮತ್ತು ಬಿ. ಪ್ರಭುಸ್ವಾಮಿ. (2025). ತುಳಸಿ ವೇಣುಗೋಪಾಲ್ ಅವರ ಆಯ್ದ ಮುಂಬೈ ಕೇಂದ್ರಿತ ಕತೆಗಳಲ್ಲಿ ಕೊಳಗೇರಿ ಜನರ ಜೀವನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(1). ಪು.ಸಂ.* 94–103

ಆಯಾಮವು ಇದೆ. ಈ ಸಾಂಸ್ಕೃತಿಕ ಆಯಾಮವು ಜಗತ್ತಿನಲ್ಲಿ ಭಿನ್ನ ಭಿನ್ನ ನಾಗರಿಕತೆಯ ಹುಟ್ಟು ಮತ್ತು ಬೆಳವಣಿಗೆಗೆ ಕಾರಣವಾಗಿದೆ. ಹೀಗೆ ವಲಸೆಗೆ ಬಹುಮುಖಿ ಆಯಾಮವಿದೆ.

ನಾಗರಿಕತೆ ಬೆಳೆದಂತೆ ವಲಸೆಯಲ್ಲಿ ಕೆಲವು ಮಾರ್ಪಾಟುಗಳಾದವು. ಕಾಲದಿಂದ ಕಾಲಕ್ಕೆ ವಲಸೆ ಹೋಗುವ ರೀತಿ ಉದ್ದೇಶಗಳು ಬದಲಾಗುತ್ತಾ ಹೋದವು. ಇತಿಹಾಸ ಪೂರ್ವಕಾಲದಲ್ಲಿ ನಡೆದುಕೊಂಡು ಆಹಾರಕ್ಕಾಗಿ ಫಲವತ್ತಾದ ಭೂಮಿ ಹರಸುತ್ತ ಹೋರಟ ಮಾನವ ಅಥವಾ ಬುಡಕಟ್ಟು ಸಮುದಾಯಗಳು ಕಾಲಕಳೆದಂತೆ ಪ್ರಾಣಿಗಳನ್ನು ಏರಿಯೋ, ರಥ, ಬಂಡಿಗಳಂತಹ ವಾಹನಗಳ ಮೂಲಕ ವಲಸೆ ಮಾಡಲಾರಂಭಿಸಿದನು. ಅಲ್ಲದೆ ವಿದ್ಯಾಭ್ಯಾಸ, ಉದ್ಯೋಗ, ವ್ಯಾಪಾರದಂತಹ ಕಾರಣಗಳಿಗಾಗಿಯೂ, ವಲಸೆ ಹೋಗಲಾರಂಭಿಸಿದನು. ಕಾಲಂತರದಲ್ಲಿ ವಲಸೆಯ ರೂಪ, ಉದ್ದೇಶಗಳು ಬದಲಾದರೂ ಆ ವಲಸೆಯ ಅಂತಿಮ ಉದ್ದೇಶ ಜೀವನ ನಿರ್ವಹಣೆಯೇ ಆಗಿದೆ.

ಹೀಗೆ ವಲಸೆಯು ಹಲವು ರೂಪಗಳಲ್ಲಿ, ಹತ್ತು ಹಲವು ಉದ್ದೇಶಗಳನ್ನು ಹೊತ್ತು ಇಂದಿಗೂ ನಡೆಯುತ್ತಿರುವುದನ್ನು ಕಾಣಬಹುದು. ಇಂದು ಸಂಚಾರ ಮತ್ತು ಸಂಪರ್ಕ ವ್ಯವಸ್ಥೆಯ ಅಭಿವೃದ್ಧಿಯಿಂದಾಗಿ ವಲಸೆ ಬೇರೆ ಬೇರೆ ರೂಪ ಪಡೆದುಕೊಂಡಿದೆ. ಇಂದು ವಲಸೆ ಹೋಗುವ, ಬರುವ ಜನರ ಪ್ರಮಾಣ ಅಪಾರವಾಗಿದೆ. ಹಳ್ಳಿಗಳಿಂದ ನಗರ, ಅಂತರ ರಾಜ್ಯ, ವಿದೇಶಗಳಿಗೆ ವಲಸೆ ಹೋಗುವವರ ಪ್ರಮಾಣ ಹೆಚ್ಚಾಗಿದೆ. ನಗರ, ಮಹಾನಗರ, ಮೆಟ್ರೋಪಾಲಿಟಿಯನ್ ಪ್ರದೇಶಗಳು ವಲಸೆ ಕೇಂದ್ರಗಳಾಗಿವೆ. ವಿದ್ಯಾಭ್ಯಾಸ, ಉದ್ಯೋಗ, ಆರೋಗ್ಯ, ವ್ಯಾಪಾರ ಇತ್ಯಾದಿ ಕಾರಣಗಳಿಗಾಗಿ ಇಂದು ಅಪಾರ ಪ್ರಮಾಣದ ಜನ ಇಂತಹ ಸ್ಥಳಗಳ ಕಡೆ ಮುಖ ಮಾಡಿದ್ದಾರೆ.

ಬಡಜನರು, ನಿರುದ್ಯೋಗಿಗಳು ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಾರೆ. ಕಾರಣ ಉದ್ಯೋಗದ ನಿರಂತರತೆ. ವರ್ಷ ಪೂರ್ತಿ ಸಿಗುವ ಉದ್ಯೋಗಕ್ಕಾಗಿ ಹೆಚ್ಚು ಜನರು ನಗರ ಭಾಗಗಳಿಗೆ ವಲಸೆ ಬರುತ್ತಾರೆ. ಆ ಮೂಲಕ ನಗರಗಳು ಹೆಚ್ಚು ಜನರ ಜೀವನ ನಿರ್ವಹಣೆಗೆ ಪೂರಕವಾಗಿವೆ. ನಗರಗಳಲ್ಲಿ ಬೃಹತ್ ಕೈಗಾರಿಕೆ, ದೊಡ್ಡ ಆಸ್ಪತ್ರೆಗಳು, ಶಾಲಾ–ಕಾಲೇಜುಗಳು, ಸರ್ಕಾರಿ ಕಟ್ಟಡಗಳು ಇವುಗಳಿಗೆಲ್ಲ ಅಪಾರ ಪ್ರಮಾಣದ ಮಾನವ ಸಂಪನ್ಮೂಲದ ಅವಶ್ಯಕತೆ ಇದೆ. ಅಲ್ಲದೆ ನಗರಗಳಲ್ಲಿ ನಿರಂತರ ಕಟ್ಟಡ ಕಾಮಗಾರಿಗಳು ನಡೆಯುತ್ತಿರುತ್ತವೆ. ಇಂತಹ ಕೆಲಸಗಳಿಗೆ ಅಪಾರ ಪ್ರಮಾಣದ ಕೂಲಿ ಕಾರ್ಮಿಕರ ಅಗತ್ಯವಿದೆ. ಆದ್ದರಿಂದ ನಗರಗಳು ತನ್ನ ಸುತ್ತಲಿನಿಂದ ಬಂದ ಲಕ್ಷಾಂತರ ಜನರಿಗೆಲ್ಲ ಉದ್ಯೋಗದ ಮೂಲಕ ಬದುಕು ಕಟ್ಟಿಕೊಳ್ಳಲು ನೆರವಾಗಿದೆ. ಹೀಗೆ ಲಕ್ಷಾಂತರ ಜನರ ಬದುಕಿಗೆ ಬೆಳಕಾಗಿರುವ ನಗರಗಳಲ್ಲಿ, ಬದುಕನ್ನು ಅರಸುತ್ತಾ ಹೋದ ಏಣಿಕೆಗೆ ಸಿಗದ ಜನರಿಂದ ಸಹಜವಾಗಿ ಕೊಳಗೇರಿಗಳು ಹುಟ್ಟಿಕೊಂಡಿರುವುದು ಮತ್ತು ಅಲ್ಲಿಯ ಜನರ ಜೀವನ ತೀರಾ ಕೆಳಮಟ್ಟದಲ್ಲಿರುವುದು ನಗರೀಕರಣದ ಕೊಡುಗೆಯಾಗಿದೆ.

ಭಾರತದ ಬಹುದೊಡ್ಡ ನಗರಗಳಲ್ಲಿ ಮುಖ್ಯವಾದ ಮುಂಬೈ ನಗರದಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗಿದೆ. ಕಡಲ ತೀರದ ನೆಲೆಯಾದ್ದರಿಂದ ಪ್ರವಾಸಿಗರು ಹೆಚ್ಚಾಗಿ ಈ ನಗರಕ್ಕೆ ಆಗಮಿಸುತ್ತಾರೆ. ಅಲ್ಲದೆ ಸಿನಿಮಾ, ಬೃಹತ್ ಉದ್ದಿಮೆಗಳು, ಐಷಾರಾಮಿ ಹೋಟೆಲ್‌ಗಳು, ದೊಡ್ಡ ದೊಡ್ಡ ಆಸ್ಪತ್ರೆ, ಶಾಲಾ–

ಕಾಲೇಜುಗಳು ಮುಂಬೈಯನ್ನು ಕೇಂದ್ರೀಕರಿಸಿಕೊಂಡಿವೆ. ಆದ್ದರಿಂದ ಈ ನಗರದಲ್ಲಿ ಉದ್ಯೋಗಾವಕಾಶ ಹೆಚ್ಚಾಗಿದೆ. ಆದ್ದರಿಂದಲೇ ಇಲ್ಲಿಗೆ ವಲಸಿಗರು ಹೆಚ್ಚಾಗಿ ಬರುತ್ತಾರೆ. ವಲಸೆ ಬಂದ ಬಡ ಜನರಿಗೆ ಮುಂಬೈನಲ್ಲಿ ಮನೆ ಸಿಗುವುದು ಗಗನಕುಸುಮವಾಗಿದೆ. ಆದ್ದರಿಂದಲೇ ಬಡ ಮತ್ತು ಕೂಲಿ ಕಾರ್ಮಿಕರು ವಾಸಿಸಲು ತಾತ್ಕಾಲಿಕ ಶೆಡ್ಡುಗಳ ಮೊರೆ ಹೋಗುತ್ತಾರೆ. ಆ ಮೂಲಕ, ಮುಂಬೈನಲ್ಲಿ ಕೊಳಗೇರಿಗಳು ಅಸ್ತಿತ್ವ ಪಡೆದವು, ಪಡೆಯುತ್ತಿವೆ. ಇಂತಹ ಕೊಳಗೇರಿಗಳಲ್ಲಿ ಲಕ್ಷಾಂತರ ಜನರು ಬದುಕು ಕಟ್ಟಿಕೊಂಡಿದ್ದಾರೆ. ನೆಲೆ ಇಲ್ಲದವರಿಗೆ ಅಲ್ಲಿ ನೆಲೆ ಸಿಕ್ಕಿರುವುದಾದರೂ ಅಲ್ಲಿ ನೆಲೆ ನಿಂತವರ ಜೀವನಮಟ್ಟ ತೀರ ಕೆಳಮಟ್ಟದಲ್ಲಿದೆ. ಕೊಳಗೇರಿಗಳು ನೈರ್ಮಲ್ಯ, ಶುದ್ಧ ಕುಡಿಯುವ ನೀರು, ಆಸ್ಪತ್ರೆಗಳಂತಹ ಮೂಲಸೌಕರ್ಯಗಳ ಸಮಸ್ಯೆಯನ್ನು ದಿನನಿತ್ಯ ಎದುರಿಸುತ್ತಿವೆ. ಭಾರತದಲ್ಲಿ ಅತಿ ದೊಡ್ಡ ಕೊಳಗೇರಿ ಮುಂಬೈ ನಗರದ ಧಾರಾವಿಯೆಂದು ಗುರುತಿಸಿಕೊಂಡಿರುವುದು. ಅಲ್ಲದೆ ಮುಂಬೈನಲ್ಲಿ ಇನ್ನು ಹಲವು ಸಣ್ಣಪುಟ್ಟ ಕೊಳಗೇರಿಗಳು ಇದ್ದು, ಇಲ್ಲಿಯ ಜನರ ಜೀವನ ಶೋಚನೀಯವಾಗಿದೆ. ಆದರೂ ಜನರ ಅನಿವಾರ್ಯತೆ ಅವರನ್ನು ಕೊಳಗೇರಿಗಳಲ್ಲಿ ವಾಸಿಸುವಂತೆ ಮಾಡಿದೆ.

ತುಳಸಿ ವೇಣುಗೋಪಾಲ್ ಅವರು ತಮ್ಮ ಕೆಲವು ಕತೆಗಳಲ್ಲಿ ಕೊಳಗೇರಿಗಳನ್ನು ಕೇಂದ್ರವಾಗಿಸಿಕೊಂಡಿದ್ದಾರೆ. ಈ ಕೊಳಗೇರಿಗಳಲ್ಲಿಯ ಜನರ ಬದುಕು, ವೈವಿಧ್ಯತೆಯಿಂದ ಕೂಡಿದ ಅವರ ಸಂಸ್ಕೃತಿ, ಅಲ್ಲಿಯ ಜನರು ಕೈಗೊಳ್ಳುವ ಉದ್ಯೋಗ, ಇತ್ಯಾದಿ ಸಂಗತಿಗಳನ್ನು ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ. ಸಮಾಜದ ಅಂಚಿನ ಜನರ ಬದುಕನ್ನು ಕೇಂದ್ರವಾಗಿಸಿಕೊಂಡಿರುವ ಅವರ ಕಥೆಗಳನ್ನು ಸಬಲ್ಟ್ರನ್ ನೋಟಕ್ರಮದಲ್ಲಿ ನೋಡಬಹುದು. ಮುಂಬೈ ತನ್ನೊಡಲಿಗೆ ಬಂದವರೆಲ್ಲರಿಗೂ ಆಶ್ರಯ ಮತ್ತು ಉದ್ಯೋಗ ಕೊಟ್ಟಿದೆ ಎಂಬುದನ್ನು ಒಪ್ಪಿಕೊಳ್ಳುತ್ತಲೇ, ವಲಸಿಗರ ತಂಗುದಾಣ ಮತ್ತು ಅವರು ಮಾಡುವ ಕಾಯಕದ ಮೇಲೆ ತುಳಸಿ ವೇಣುಗೋಪಾಲ್ ಅವರು ಬೆಳಕು ಹರಿಸಿದ್ದಾರೆ. ಮುಂಬೈ ಶಹರ ಕುರಿತಂತೆ ತನ್ನೊಳಗೆ ಹಲವು ಕನಸುಗಳನ್ನು ಕಟ್ಟಿಕೊಂಡು ಬಂದ ವಲಸಿಗನಿಗೆ ಶಹರದೊಳಗಿನ ಕೆಲ ದಿನಗಳ ಜೀವನ ನಗರದ ವಾಸ್ತವತೆಯನ್ನು ಅರ್ಥ ಮಾಡಿಸುತ್ತದೆ. ಆ ವಾಸ್ತವ ಪರಿಸರಕ್ಕೆ ಒಗ್ಗಿದರೆ ಆತ ಅಲ್ಲೇ ಬದುಕು ಕಟ್ಟಿಕೊಳ್ಳುತ್ತಾನೆ, ಇಲ್ಲವಾದರೆ ಬಂದ ದಾರಿ ಎಡೆಗೆ ಮುಖಮಾಡಿ ಈ ಶಹರದಿಂದ ಕಾಲು ಕೀಳುತ್ತಾನೆ. ಎಂಬ ಅಂಶಗಳನ್ನೊಳಗೊಂಡು ಕತೆ ಸಾಗಿದೆ. "ದಿನನಿತ್ಯ ಈ ಶಹರದ ಸಹಸ್ರ ರಂದ್ರಗಳಿಂದ ಲಕ್ಷಗಟ್ಟಲೆ ಜನ ಒಳ ಸೇರುತ್ತಾರೆ. ವಿನಾಕಾರಣ ವಿಚಿತ್ರ ಚುಂಬಕದಂತೆ ವ್ಯಕ್ತಿಯನ್ನು ಸೆಳೆದು ಪಣಕ್ಕೊಡ್ಡುತ್ತದೆ ಈ ಶಹರ. ಎಲ್ಲಾ ಪೊಳ್ಳು ಪೋಸುಗಳನ್ನು ಅಡಗಿಸಿ ಚುಚ್ಚಿ ಬಟಾ ಬಯಲಿನಲ್ಲಿ ಗಕ್ಕನೆ "ನಿಲ್ಲು ಮಗನೇ" ಎಂದು ನಿಲ್ಲಿಸುತ್ತದೆ"[1] ಎಂಬ ಜಯಂತ ಕಾಯ್ಕಿಣಿ ಮಾತುಗಳು ಶಹರ ಒಡ್ಡುವ ಸವಾಲುಗಳನ್ನು ಪರಿಚಯಿಸುತ್ತದೆ. ಹೀಗೆ ಮುಂಬೈನ ನಿರ್ದಯ ಮತ್ತು ಕ್ರೂರತ್ವದಂತಹ ಅಂಶಗಳನ್ನು ತುಳಸಿ ಅವರು ಹೊಂಚು ಮತ್ತು ಆಕಾಶಬಾಣ ಎಂಬೆರಡು ಕಥೆಗಳ ಕೇಂದ್ರವಾಗಿಸಿಕೊಂಡಿದ್ದಾರೆ.

ಹೊಂಚು ಕಥೆಯ ಕೇಂದ್ರ ಪಾತ್ರ ಪಾಂಡೋಬ ಅಥವಾ ಪಾಂಡು. ಪಾಂಡು ಕುಟುಂಬದ ಕಷ್ಟದ ಸಂದರ್ಭವನ್ನು ತಿಳಿದುಕೊಂಡ ಪಾಂಡುನ ಹೆಂಡತಿ ಸಕ್ಕುಳ ದೂರದ ಸಂಬಂಧಿ ಪುಂಡಲೀಕ, ಮುಂಬೈನ ಬಣ್ಣದ ಬದುಕಿನ ಕನಸು ಬಿತ್ತುತ್ತಾನೆ. ತಮ್ಮ ಬದುಕು ಉತ್ತಮಗೊಳ್ಳುವುದೆಂಬ ಆಸೆಯಿಂದ ಪಾಂಡು ಮತ್ತು

ಸಕ್ಕು ಹಾಗೂ ತಮ್ಮ ಮೂವರು ಮಕ್ಕಳೊಂದಿಗೆ ಊರಿನಲ್ಲಿದ್ದ ಆಸ್ತಿಯನ್ನು ಮಾರಿ ಮುಂಬೈ ಸೇರುತ್ತಾರೆ. ಮುಂಬೈಗೆ ಬಂದ ಪಾಂಡು ಮತ್ತು ಅವನ ಕುಟುಂಬಕ್ಕೆ ಪುಂಡಲೀಕ ವಾಸಿಸುವ ಕೊಳಗೇರಿಗಳ ಪರಿಚಯ ಮಾಡಿಸುತ್ತಾನೆ. ಕೊಳಗೇರಿಗಳಲ್ಲಿ ಜನರ ಜೀವನ ಅಲ್ಲಿಯ ಪರಿಸರದಿಂದಾಗಿ ಪಾಂಡುಗೆ ದಿಕ್ಕು ಕೆಟ್ಟಂತೆ ಆದರೂ, ಬದುಕು ಕಟ್ಟಿಕೊಳ್ಳುವ ಅನಿವಾರ್ಯತೆಯಲ್ಲಿ ಕೊಳಗೇರಿಯ ಒಂದು ಪುಟ್ಟ ಖೋಲಿಯಲ್ಲಿ ವಾಸ್ತವ್ಯ ಹೂಡುತ್ತಾನೆ. ಇತ್ತ ಪುಂಡಲೀಕ ದಾರು ಬಾಟಲಿಯ ಕಳ್ಳ ವ್ಯಾಪಾರಕ್ಕೆ ಪಾಂಡುವನ್ನು ನೇಮಿಸುತ್ತಾನೆ. ಮುಗ್ಧ ಪಾಂಡು ಅನಿವಾರ್ಯವಾಗಿ ಈ ವ್ಯಾಪಾರಕ್ಕೆ ಒಪ್ಪಿಕೊಳ್ಳುತ್ತಾನೆ. ನಂತರ ಪೊಲೀಸರ ಕೈಗೆ ಸಿಕ್ಕಿಬಿದ್ದು ಕೆಲದಿನಗಳು ಸೆರೆಮನೆ ವಾಸವನ್ನು ಅನುಭವಿಸುತ್ತಾನೆ. ಸೆರೆಮನೆ ವಾಸದಿಂದ ಬಂದ ಪಾಂಡು ಜೀವನೋತ್ಸಾಹವನ್ನೇ ಕಳೆದುಕೊಳ್ಳುತ್ತಾನೆ. ಯಾವ ಕೆಲಸಕ್ಕೆ ಹೋದರು ಮೂರೇ ದಿನದಲ್ಲಿ ಆ ಕೆಲಸ ಬಿಟ್ಟು ಬರುತ್ತಾನೆ. ಅಂತಿಮವಾಗಿ ಪುಂಡಲೀಕನು ಸರ್ಕಾರಿ ಕೆಲಸವೆಂದು ಸುಳ್ಳು ಹೇಳಿ, ನಗರ ಪಾಲಿಕೆಯ ಕೆಲಸವೆಂದು ನಂಬಿಸಿ, ರಾತ್ರಿ ಸಮಯದಲ್ಲಿ ಇಲಿಗಳನ್ನು ಕೊಂದು ತರುವ ಕೆಲಸ ಕೊಡಿಸುತ್ತಾನೆ. ಅಮಾಯಕ ಪಾಂಡು ಸರ್ಕಾರಿ ಕೆಲಸ ಅಲ್ಲದೆ ಇಪ್ಪತ್ತೈದು ಇಲಿಗಳಿಗೆ ನೂರು ರೂಪಾಯಿ ಒಂದು ರಾತ್ರಿಯಲ್ಲಿ ಸಿಗುವುದೆಂಬ ಹಣದಾಸೆಗೆ ಒಪ್ಪಿಕೊಳ್ಳುತ್ತಾನೆ. ಇತ್ತ ಪುಂಡಲೀಕನು ಪಾಂಡುವಿನ ಮನೆಯನ್ನು ಜೂಜಾಟದ ಅಡ್ಡವನ್ನಾಗಿ ಮಾಡುತ್ತಾನೆ. ಅಲ್ಲದೆ ಸಕ್ಕುಳನ್ನು ವೇಶ್ಯಾವಾಟಿಕೆಗೆ ತೊಡಗಿಸುತ್ತಾನೆ.

ಆದರೆ ಪಾಂಡುವಿನ ಎಣಿಕೆಯಂತೆ ಒಂದು ರಾತ್ರಿಯಲ್ಲಿ ಇಪ್ಪತ್ತೈದು ಇಲಿಗಳನ್ನು ಕೊಂದು ತರುವುದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ. ಆದರೆ ತಾನು ಮುಂಬೈಗೆ ಬಂದು ಈ ರೀತಿಯ ಕೆಲಸ ಮಾಡುತ್ತಿರುವುದರ ಬಗ್ಗೆ ಹೇಸಿಗೆ ಎನಿಸುತ್ತದೆ. ಅಲ್ಲದೆ ಅದೇ ರಾತ್ರಿ ನಡು ರಸ್ತೆಯಲ್ಲಿ ನಡೆದ ಕೊಲೆ ನೋಡಿ ಮುಂಬೈ ಬಗ್ಗೆ ಅಸಮಾಧಾನ ಗೊಂಡು, ಆ ಕೊಲೆ ನಡೆದ ಸ್ಥಳದಿಂದ ಓಡಿ ತನ್ನ ಖೋಲಿಗೆ ಬರುತ್ತಾನೆ. ಖೋಲಿಯ ಬಾಗಿಲು ತಳ್ಳಿ ಒಳಹೋದಾಗ, ತನ್ನ ಹೆಂಡತಿಯ ಅನೈತಿಕ ಮಾರ್ಗದ ಬಗ್ಗೆ ಹೇಸಿ, ತನ್ನ ಬದುಕನ್ನೇ ಹೊಂಚುಹಾಕಿ ಕೊಂದ ಮುಂಬೈ, ಪುಂಡಲೀಕ, ತನ್ನ ಹೆಂಡತಿ ಸಕ್ಕೂಳ ಮೇಲೆ ಕೋಪಗೊಂಡು ದೊಣ್ಣೆಯಿಂದ ಹೊಡೆದು ಕೊಂದು, "ಬಂಜರಾಗುತ್ತಿರುವ ನನ್ನ ಮಣ್ಣಿದೆ"[2] ಎಂದು ರಸ್ತೆಯಲ್ಲಿ ಓಡುವುದರೊಂದಿಗೆ ಕತೆ ಮುಕ್ತಾಯಗೊಂಡಿದೆ.

ಕೊಳಗೇರಿ ಜನರ ಬದುಕನ್ನೇ ಕೇಂದ್ರವಾಗಿಸಿಕೊಂಡ ತುಳಸಿ ವೇಣುಗೋಪಾಲ್ ಅವರ ಮತ್ತೊಂದು ಕಥೆ, ಆಕಾಶ ಬಾಣ. ಈ ಕಥೆಯ ಕೇಂದ್ರ ಪಾತ್ರ ಬಚ್ಚು ಅಥವಾ ಬಚ್ಚು ಬಾಯಿ. ಮುಂಬೈನ ಕೊಂಡಸ್ಕರವಾಡಿ ಎಂಬ ಕೊಳಗೇರಿಯಲ್ಲಿ ತನ್ನ ತಾಯಿಯೊಂದಿಗೆ ಬಚ್ಚು ವಾಸವಿದ್ದಾನೆ. ಆತನ ಕೆಲಸ ಮದುವೆ, ಪಾರ್ಟಿ, ಹಬ್ಬಗಳು ನಡೆಯುವಾಗ ಪಟಾಕಿ, ಆಕಾಶಬಾಣಗಳನ್ನು ಹಚ್ಚುವುದು. ಬಚ್ಚುನ ತಂದೆ ಗಿರಣಿಯಲ್ಲಿ ಕೆಲಸ ಮಾಡುವಾಗ ಯಂತ್ರದಿಂದ ತನ್ನ ಕೈ ಕಳೆದುಕೊಂಡು, ಸಾಯುವವರೆಗೂ ಹಾಸಿಗೆ ಹಿಡಿದರು. ಇತ್ತ ಗಿರಣಿಯು ಮುಚ್ಚಿ ಹೋಯಿತು. ಬಚ್ಚು ಮತ್ತು ಆತನ ತಾಯಿಗೆ ಈ ಗಿರಣಿಯು ಮತ್ತೆ ಪ್ರಾರಂಭವಾಗಿ, ತಂದೆಯ ಕೆಲಸಕ್ಕೆ ಬಚ್ಚು ಸೇರಬೇಕೆಂಬ ಹಂಬಲ. ಅದಕ್ಕಾಗಿಯೇ ಪ್ರತಿ ವಾರ ಬಚ್ಚು ಗಿರಣಿ ಮಾಲೀಕ ಸುರ್ವೆ ಚಾಚಾನನ್ನು ಕಂಡುಬರುತ್ತಿದ್ದ. ಬದಲಾದ ಕಾಲಮಾನ, ಕೋರ್ಟು ಕಚೇರಿಗಳ ನೀತಿಗಳಿಂದಾಗಿ ಗಿರಣಿ ಪ್ರಾರಂಭವಾಗುವ ಯಾವ ಲಕ್ಷಣಗಳು ಕಾಣಿಸುತ್ತಿರಲಿಲ್ಲ. ಇತ್ತ ಬಚ್ಚುಗೆ ಮದುವೆ

ಮಾಡಲು ಯೋಚಿಸಿದ ಬಚ್ಚುನ ತಾಯಿ, ತನ್ನೂರಿನ ಸಂಬಂಧಿಕರಿಂದ ಮುಂಬೈಯಲ್ಲಿ ತನ್ನ ಮಗ ಮಾಡುವ ಉದ್ಯೋಗದ ಬಗ್ಗೆ ಹೇಳಿ, ಆಕೆ ಅಪಹಾಸ್ಯಗೊಂಡು, ಅವಮಾನಿತಳಾಗಿ ಬರುತ್ತಾಳೆ. ಮನನೊಂದು ತಾಯಿ ನಡೆದ ಘಟನೆಯನ್ನು ಬಚ್ಚುಗೆ ಹೇಳಿದಾಗ, ಬಚ್ಚು ಅಸಹಾಯಕತೆಯಲ್ಲಿ ಗಿರಣಿಯ ನಸೀಬನ್ನು ಶಪಿಸುತ್ತಾನೆ.

ಇದೇ ಸಂದರ್ಭದಲ್ಲಿ ಕೊಂಡಸ್ಕರವಾಡಿಯಲ್ಲಿ ಸ್ಪರ್ಧಿಸಿ ಗೆದ್ದಿದ್ದ ರಾಜಕಾರಣಿ ಮಂತ್ರಿಯಾಗಿರುತ್ತಾನೆ. ಆತನಿಗೆ ಕೊಂಡಸ್ಕರವಾಡಿಯ ಜನ ಸನ್ಮಾನ ಏರ್ಪಡಿಸಿರುತ್ತಾರೆ. ಈ ಕಾರ್ಯಕ್ರಮಕ್ಕೆ "ಆತೀಶ್ ಬಾಜಿ"[3] ನಡೆಸುವ ಹೊಣೆ ಬಚ್ಚುನದ್ದಾಗಿರುತ್ತದೆ. ಮಂತ್ರಿಗಳು ಸಭೆಗೆ ಆಗಮಿಸಿ ಭಾಷಣ ಮಾಡುವಾಗ ಬಚ್ಚು ಆಕಾಶ ಬಾಣಗಳನ್ನು ಬಿಡುತ್ತಿರುತ್ತಾನೆ. ಮಂತ್ರಿಯು ತಮ್ಮ ಭಾಷಣದ ಮಧ್ಯೆ, ಹಳೆಯ ಗಿರಣಿಗಳ ಜಾಗದಲ್ಲಿ ಹೊಸ ಮಾಲ್‌ಗಳು ತಲೆ ಎತ್ತುತ್ತವೆ. ಮುಂಬೈ ಕೆಲವೇ ವರ್ಷಗಳಲ್ಲಿ ಶಾಂಗೈ ಆಗುತ್ತದೆ. ಎಂಬ ಮಾತುಗಳನ್ನು ಆಲಿಸಿದ ಬಚ್ಚುಗೆ ಆಶಾಭಂಗವಾಗುತ್ತದೆ. ನೊಂದ ಬಚ್ಚು ಯಾವ ಆತೀಶ್ ಬಾಜಿಯನ್ನು ನಡೆಸದೆ, ಒಂದು ಕಡೆ ಕುಳಿತು ಅಳತೊಡಗುತ್ತಾನೆ. ಅತ್ತ ಸ್ವಲ್ಪ ದೂರದಲ್ಲಿ ಉಳಿದ ಪಟಾಕಿಯ ಪೊಟ್ಟಣವನ್ನು ಎತ್ತಿಕೊಳ್ಳುತ್ತಿರುವ ಪುಟ್ಟ ಪೋರ ಕೊಳಗೇರಿ ಜನರ ಮುಂದಿನ ಭವಿಷ್ಯದ ರೂಪಕವಾಗುವ ಮೂಲಕ ಕಥೆ ಮುಕ್ತಾಯಗೊಂಡಿದೆ.

ಹೊಂಚು ಮತ್ತು ಆಕಾಶ ಬಾಣ ಎರಡು ಕಥೆಗಳ ಕೇಂದ್ರ ಮುಂಬೈನ ಕೊಳಗೇರಿ ಜನರ ಬದುಕು. ಅಲ್ಲಿಯ ಜನರ ವಸತಿ, ಆಲ್ಲಿಯ ಜನರು ಬದುಕಿಗಾಗಿ ಮಾಡುವ ಉದ್ಯೋಗ, ಕೊಳಗೇರಿಗಳ ಪರಿಸರ ಇವೆಲ್ಲವನ್ನು ಸೂಕ್ಷ್ಮವಾಗಿ ತಮ್ಮ ಕಥೆಗಳಲ್ಲಿ ಕಥೆಗಾರ್ತಿ ಹಿಡಿದಿಟ್ಟಿದ್ದಾರೆ. ಜಾತಿ ಧರ್ಮಗಳ ಗಡಿಗಳ ಆಚೆ, ವರ್ಗದ ನೆಲೆಯಲ್ಲಿ ಕೊಳಗೇರಿಗಳನ್ನು ಲೇಖಕಿ ಗ್ರಹಿಸಿರುವ ಬಗೆ ವಿಶಿಷ್ಟವಾಗಿದೆ. ವರ್ಗದ ನೆಲೆಯಲ್ಲಿ ತೀರ ಅಂಚಿನಲ್ಲಿರುವ ಈ ಕೊಳಗೇರಿಗಳ ಜನರ ಬದುಕು ತೀರ ಭಿನ್ನವು, ವಿಶಿಷ್ಟವು ಆಗಿದೆ.

ಎರಡು ಕಥೆಗಳಲ್ಲಿ ಕೊಳಗೇರಿಯ ವಾಸ್ತವ ಚಿತ್ರಣವಿದೆ. ಅಲ್ಲಿಯ ಪರಿಸರದ ಬಗ್ಗೆ ಕತೆಗಳೊಳಗೆ ಬರುವ ಸಾಲುಗಳು ಕೊಳಗೇರಿಯನ್ನು ಅರಿಯಲು ಪೂರಕವಾಗುತ್ತದೆ. ಹೊಂಚು ಕತೆಯಲ್ಲಿ, ಪಾಂಡು ಮುಂಬೈಗೆ ಬಂದ ಸಂದರ್ಭದಲ್ಲಿ, "ರಿಕ್ಷಾದಿಂದ ಇಳಿದು ಕೊಳಗೇರಿಗೆ ಕಾಲಿಡುವ ಹೊತ್ತಿಗೆ ಪಾಂಡುನ ಎದೆ ಝುಗ್ ಎಂದಿತು. ಕೊಚ್ಚೆ ಗುಂಡಿ ಇದ್ದರೆ ಉಗುಳುಗುಳಿ ಸಾಕಾಗುವ ಪಾಂಡುಗೆ ಈ ನರಕದಲ್ಲಿ ಕಾಲು ಜಡಿದು ಹೋದಂತೆ........"[4] ಎಂಬ ಕಥೆಯೊಳಗಿನ ಸಾಲುಗಳು ಹಾಗೆಯೇ ಆಕಾಶ ಬಾಣ ಕಥೆಯಲ್ಲಿ "ಕೊಂಡಸ್ಕರವಾಡಿಯಲ್ಲಿರುವ ತರಲೆ ಮಂದಿಗೆ ಈ ಕೊಳಗೇರಿ ಪದ ಪ್ರಯೋಗ ಸುಳಿವು ಸಿಕ್ಕರೆ ಸಣ್ಣ ರೀತಿಯ ಒಂದು ಗಲಭೆ, ದೊಂಬಿ ನಡೆಯುವುದು ಖಂಡಿತ. ಉತ್ತರ ಭಾರತೀಯರೆ ಹೆಚ್ಚಾಗಿರುವ ವಾಡಿ ಪೂರ್ವದ ಕೆಲ ಕತ್ತಲೆ ಗಲ್ಲಿಗಳಲ್ಲಿ ಒಂದೆರಡು ಹೆಣಗಳು, ಅರೆ ಸುಟ್ಟ ಜೋಪಡಿಗಳೊಳಗಿನ ಬಿಕ್ಕಳಿಕೆ ನಮ್ಮ ಎದೆಯನ್ನು ನಡುಗಿಸಬಹುದು."[5] ಇದೆ ಕಥೆಯ ಮತ್ತೊಂದೆಡೆ "ಏಜೆಂಟ್ ವಾಡಿಯ ಕೊನೆಯಲ್ಲಿರುವ ಕೊಳೆತು ನಾರುತ್ತಿರುವ ನಾಲೆಯ ಪಕ್ಕದ ಕಚ್ಚಾ ಖೋಲಿಗಳ ಬಾಗಿಲು ತೆರೆಯುತ್ತಿದ್ದ. 26 ಜುಲೈಯಂದು ಈ ನಾಲೆ ಉಕ್ಕಿ ಹರಿದು, ಇಡೀ ಕೊಂಡಸ್ಕರವಾಡಿ ಪಶ್ಚಿಮ ನೀರಿನಲ್ಲಿ ಮುಳುಗಿ ನಿಂತಿದ್ದನ್ನು ಕಂಡು, ವಾಡಿ ಪೂರ್ವದಲ್ಲಿರುವ ಜನರು ಒಂದು ರೀತಿಯಲ್ಲಿ ಸಂಭ್ರಮಿಸಿದ್ದರು."[6] "ನದಿಯ ನೀರನ್ನು

ಮಲಿನಗೊಳಿಸಬಾರದು, ಹಾಗೆಂದು ನಾಲೆಯ ಅಕ್ಕಪಕ್ಕದಲ್ಲಿ ಹುಲುಸಾಗಿ ಬೆಳೆದಿರುವ ದಟ್ಟ ಪೊದೆಗಳ ಮರೆಯಲ್ಲಿ ಬಹಿರ್ದೆಸೆ ಹೋಗುವವರು ತಮ್ಮ ಪಾಡಿಗೆ ಅಲ್ಲಿ ಹೋಗುವುದನ್ನು ನಿಲ್ಲಿಸಿಲ್ಲ."[7] ಕೊಳಗೇರಿ ಪರಿಸರಕ್ಕೆ ಸಂಬಂಧಿಸಿದಂತೆ ಕಥೆಯೊಳಗೆ ಇಂತಹ ಇನ್ನೂ ಹಲವು ಸಂದರ್ಭಗಳಿವೆ. ಕತೆಯೊಳಗಿನ ಇಂತಹ ಸಂದರ್ಭಗಳು ತೀರ ಬಡ ವರ್ಗಗಳು ದಿನನಿತ್ಯ ಬದುಕುವ ಬದುಕು ಮತ್ತು ಅವರ ಜೀವನಪ್ರೀತಿಯನ್ನು ಅರ್ಥೈಸುತ್ತದೆ.

ಕೊಳಗೇರಿಗಳಲ್ಲಿ ಇಂತಹ ಸ್ಥಿತಿ ಉಂಟಾಗಲು ಹಲವಾರು ಕಾರಣಗಳಿವೆ. ನಗರದಲ್ಲಿ ವಸತಿ ಸಮಸ್ಯೆಯು ಅವುಗಳಲ್ಲಿ ಬಹು ಮುಖ್ಯವಾದದ್ದು. ಒಂದೇ ಸ್ಥಳದಲ್ಲಿ ಅಧಿಕ ಅಭಿವೃದ್ಧಿ ಕೆಲಸಗಳು ನಡೆಯುವುದು ಬೃಹತ್ ಉದ್ದಿಮೆಗಳ ಕೇಂದ್ರವಾಗಿರುವುದರಿಂದ ಅಧಿಕ ಜನರು ವಲಸೆಯ ಪರಿಣಾಮವಾಗಿ ಕೊಳಗೇರಿಗಳು ತಲೆ ಎತ್ತುತ್ತವೆ. ಕೊಳಗೇರಿಗಳ ಅಸ್ತವ್ಯಸ್ತ ಪರಿಸರ, ಗಲೀಜು ತುಂಬಿದ ರಸ್ತೆಗಳು, ಮೂಲ ಸೌಕರ್ಯಗಳಿಲ್ಲದಂತಹ ವ್ಯವಸ್ಥೆ ಇವೆಲ್ಲವುಗಳ ನಡುವೆ ಬದುಕುತ್ತಿರುವ ಅತ್ಯಂತ ಬಡವರ್ಗದ ಜನರ ಬದುಕು ಧಾರುಣವಾಗಿದೆ. ನಗರದ ಶ್ರೀಮಂತ ಮತ್ತು ಮಧ್ಯಮ ವರ್ಗದ ಜನರು ಊಹಿಸಲು ಸಾಧ್ಯವಾಗದ ದೈನಂದಿನ ಬದುಕು ಈ ಕೊಳಗೇರಿ ಜನರ ಬದುಕಾಗಿದೆ.

ಕೊಳಗೇರಿ ಜನರು ಮಾಡುವ ಉದ್ಯೋಗಗಳನ್ನು ಲೇಖಕಿ ಚಿತ್ರಿಸಿದ್ದು, ಈ ಜನರ ಉದ್ಯೋಗ ತೀರ ಭಿನ್ನವು, ವಿಶಿಷ್ಟವೂ ಆಗಿದೆ. ಹೊಂಚು ಕಥೆಯ ಪಾಂಡು ಮಾಡುವ ಕೆಲಸಗಳಾದ ದಾರು ವ್ಯಾಪಾರ, ಸೈಕಲ್ ಶಾಪಿನ ಕೆಲಸ, ಚರಂಡಿ ಸ್ವಚ್ಛಗೊಳಿಸುವ ಕೆಲಸ, ಕೊನೆಯಲ್ಲಿ ರಾತ್ರಿ ವೇಳೆ ಇಲಿ ಹೊಡೆಯುವ ಕೆಲಸಗಳನ್ನು ಮಾಡಿದರೆ, ಆಕಾಶಬಾಣ ಕಥೆಯ ಬಚ್ಚು ಪಟಾಕಿ ಹೊಡೆಯುವ ಕೆಲಸ ಮಾಡುತ್ತಿರುತ್ತಾನೆ. ಎರಡು ಕಥೆಯ ಕೇಂದ್ರ ಪಾತ್ರಗಳು ನಿರ್ವಹಿಸುವ ಕೆಲಸಗಳು ನಾಗರಿಕ ಸಮಾಜದಲ್ಲಿ ಗೌರವವಲ್ಲದವು. ಆದರೆ ಗೌರವ ಅಗೌರವದ ಆಚೆಗಿನ ಬದುಕು ಈ ಕೊಳಗೇರಿ ಜನರದ್ದು.

ಹೊಂಚು ಕಥೆಯಲ್ಲಿ "ಏ ಸೌತ್ಯಾ, ಬಿಟ್ಟುಬಿಡೋ ಅವನನ್ನು. ಅವನು ಇಲಿ ಹೊಡೆಯುವ ನಾಮರ್ದ್ ಸಾಲ ಇದ್ದಾನೆ"[8] ಎಂಬ ರೌಡಿಗಳು ಆಡುವ ಮಾತು, ಆಕಾಶಬಾಣ ಕಥೆಯಲ್ಲಿ "ಬೆಹನ್ ಜೀ ಇದೆಂತಹ ನೌಕರಿ. ಶಾದಿ, ಬಾರತ್, ಮೇಲಾಗಳಲ್ಲಿ ನಾವು ಪಟಾಕಿ ಸುಡುತ್ತೇವೆ. ಯೆ ಕೈಸಾ ಬಂಬಯಿ? ಎಂತೆಂತಹ ದಂಧೆಗಳಪ್ಪ."[9] ಎಂಬ ಬಚ್ಚುನ ಕೆಲಸ ಕುರಿತ ಅಪಹಾಸ್ಯದ ಮಾತುಗಳು ನಾಗರಿಕ ಸಮಾಜವು ಮಾತ್ರ ಸಿಂಧುಗೊಳಿಸಿ, ಇದು ಗೌರವಯುತವಾದದ್ದು ಎಂಬಂತಹ ಉದ್ಯೋಗಗಳನ್ನು ಮಾತ್ರ ಒಪ್ಪಿಕೊಳ್ಳುತ್ತದೆ. ಇಲ್ಲದಿದ್ದರೆ ಸಮಾಜ ಹೀಗೆ ಅಪಹಾಸ್ಯ ಮಾಡುತ್ತದೆ. ಆದರೂ ಇಂತಹ ಉದ್ಯೋಗಗಳನ್ನು ಕಲ್ಪಿಸಿರುವುದು ಮುಂಬೈನ ನಾಗರಿಕ ಸಮಾಜವೇ. ಶ್ರೀಮಂತರ, ಮಧ್ಯಮ ವರ್ಗದ ಜನರ ಕೆಲಸಗಳಿಗೆ ಪಾಂಡು ಮತ್ತು ಬಚ್ಚು ನಂತಹ ಕೆಲಸದವರು ಅವಶ್ಯಕವಾಗಿದ್ದಾರೆ. ಬಹುಸಂಖ್ಯೆ ಉದ್ಯೋಗ ಅರಸಿ ಹೊಗುವವರಿಗೆ ದೊರಕಿರುವುದು ಇಂತಹ ಕೆಲಸಗಳೆ ಆಗಿವೆ. ಆದರೆ ಅಂತಹ ಕೆಲಸವನ್ನು ಅದೇ ಸಮಾಜ ಅಪಹಾಸ್ಯ ಮಾಡುವುದು ಹಾಗೂ ಅವರ ಕೆಲಸಗಳನ್ನು ಒಪ್ಪಿಕೊಳ್ಳದಿರುವುದರ ಹಿಂದೆ ವರ್ಗ ರಾಜಕಾರಣ ಅಡಗಿದೆ. ಅಲ್ಲದೆ ಕೊಳಗೇರಿ ಜನರು ಬದುಕಿಗಾಗಿ ಯಾವುದಾದರೊಂದು ಉದ್ಯೋಗವನ್ನು ಸೃಷ್ಟಿಸಿಕೊಳ್ಳುವ ಅವರ ಕೌಶಲ, ಆ ಉದ್ಯೋಗದೊಳಗಿನ ಅವರ ಪ್ರತಿಭೆಯು ಆ ಜನರ ಜೀವನ ನಿರ್ವಹಣೆಯ ಕೌಶಲವನ್ನು

ತಿಳಿಸುತ್ತದೆ. " ಬಡವರನ್ನು ಕೇವಲ ಹಸಿದ ಹೊಟ್ಟೆಗಳಾಗಿ ನೋಡದೆ, ಅವರಲ್ಲಿ ಸುಪ್ತವಾಗಿರುವ ಅಸಾಧಾರಣ ಪ್ರತಿಭೆಯನ್ನು, ಆ ಪ್ರತಿಭೆಗೆ ಸದ್ಯದ ಸಾಮಾಜಿಕ ವ್ಯವಸ್ಥೆಯಲ್ಲಿ ಅಂತ ಮಾನ್ಯತೆ ಸಿಗದಿರುವ ದುರಂತವನ್ನು ತುಳಸಿ ವೇಣುಗೋಪಾಲ್ ಅವರ ಕಥೆಯು ನಿರೂಪಿಸುತ್ತದೆ."[10] ಎಂಬ ಟಿ. ಪಿ. ಅಶೋಕರ ಮಾತುಗಳು ಕೊಳಗೇರಿ ಜನರ ಜೀವನಪ್ರೀತಿಯನ್ನು ಅಭಿವ್ಯಕ್ತಿಸುತ್ತದೆ.

ಮುಂಬೈ ತನ್ನೊಳಗೆ ಬಂದವರೆಲ್ಲರಿಗೂ ಆಶ್ರಯ ನೀಡುತ್ತದೆ, ಬದುಕು ಕಟ್ಟಿಕೊಳ್ಳಲು ನೆರವಾಗುತ್ತದೆ. ಹೊಂಚು ಕಥೆಯಲ್ಲಿ "ಅಲ್ಲಿ ಅತಿವೃಷ್ಟಿ ಇಲ್ಲ, ಅನಾವೃಷ್ಟಿ ಇಲ್ಲ, ಆಕಾಶಕ್ಕೆ ತಾಗಿ ನಿಲ್ಲುವ ಭಾರಿ ಕಟ್ಟಡಗಳಿಗೆ ಎಂದು ಸಿಡಿಲು ಬಡಿಯುವುದಿಲ್ಲ. ಹಸಿವೆಯಿಂದ ಯಾರೂ ಸತ್ತವರಿಲ್ಲ. ತಿಪ್ಪೆಗುಂಡಿ ಕೆದಕಿದರು ಸಾಕು ಅನ್ನ ಹುಟ್ಟುತ್ತದೆ."[11] ಎಂಬ ಪುಂಡಲೀಕನ ಮಾತು ಮುಂಬೈ ನಗರ ಸರ್ವರಿಗೂ ಪೋಷಕ ಸ್ಥಾನದಲ್ಲಿದೆ ಎಂಬ ಅರ್ಥದಲ್ಲಿದೆ. ಜಯಂತ ಕಾಯ್ಕಿಣಿ ಅವರು ಸಹ ತಮ್ಮ ಕಥೆಗಳೊಳಗೆ ಮುಂಬೈನ ಬದುಕನ್ನು, ಈ ನಗರದ ಸಂವೇದನೆಗಳನ್ನು, ಇಲ್ಲಿಯ ಅಮಾನುಷತೆಯನ್ನು ತಮ್ಮ ಕಥೆಗಳಲ್ಲಿ ಸಮರ್ಥವಾಗಿ ಅಭಿವ್ಯಕ್ತಪಡಿಸಿದ್ದಾರೆ. ಮುಂಬೈ ಮಾತೃರೂಪಿ ಎಂಬ ತತ್ವದ ಅಡಿಯಲ್ಲಿ ಅವರ ಬಹುತೇಕ ಕಥೆಗಳು ಕೇಂದ್ರೀಕರಿಸಿವೆ. ಆದರೆ ತುಳಸಿ ವೇಣುಗೋಪಾಲ್ ಅವರು ಜಯಂತರ ಕಥೆಗಳ ತಾತ್ವಿಕತೆಯನ್ನು ಒಪ್ಪಿ, ಮುಂದುವರೆದು ಮುಂಬೈ ತನ್ನೊಳಗೆ ಬಂದ ಜನರಿಗೆ ನೀಡಿರುವ ಬದುಕನ್ನು ಬಿಡಿಬಿಡಿಯಾಗಿ ನೋಡಿದ್ದಾರೆ. ಆ ಮೂಲಕ ಮುಂಬೈ ಕುರಿತ ತಮ್ಮದೇ ಆದ ತಾತ್ವಿಕತೆಗಳನ್ನು ತಮ್ಮ ಕಥೆಗಳ ಮೂಲಕ ಕಟ್ಟಹೊರಟಿದ್ದಾರೆ.

ಮುಂಬೈಗೆ ಹೊರಗಿನಿಂದ ಬಂದವರೆಲ್ಲ ಬದುಕು ಕಟ್ಟಿಕೊಂಡಿದ್ದಾರೆ ಎಂಬುದನ್ನು ಒಪ್ಪಿಯು, ಬಂದಂತಹ ಜನ ಹೇಗೆ ಬದುಕು ಕಟ್ಟಿಕೊಂಡಿದ್ದಾರೆ? ಎಂಬ ಪ್ರಶ್ನೆಯಲ್ಲೇ ಆ ಜನರು ಮಾಡುವ ಉದ್ಯೋಗ, ಅಥವಾ ದಂಧೆ, ಅವರ ವಸತಿ ವ್ಯವಸ್ಥೆ, ಆ ಜನರನ್ನು ಸಮಾಜ ಬಳಸಿಕೊಳ್ಳುತ್ತಿರುವ ರೀತಿ ಇತ್ಯಾದಿ ಅಂಶಗಳತ್ತ ಲೇಖಕಿ ಗಮನಹರಿಸಿದ್ದಾರೆ. ಆ ಮೂಲಕ ತುಳಸಿ ಅವರು ಬೇರೆ ಕಥೆಗಾರರಿಗಿಂತ ತುಸು ಭಿನ್ನವಾಗಿದ್ದಾರೆ.

ಕೊಳಗೇರಿಯ ಕೆಲವು ಉದ್ಯೋಗಗಳು ನಾಗರಿಕ ಸಮಾಜದಲ್ಲಿ ಗೌರವವಿರುವಂತಹದಲ್ಲವು. ಇಂತಹ ಉದ್ಯೋಗಗಳನ್ನು ತನ್ನ ವಲಸಿಗರಿಗೆ ಕರುಣಿಸಿರುವ ಮುಂಬೈ, ಆ ಮೂಲಕ ಎಂತಹ ಬದುಕನ್ನು ಅಲ್ಲಿಯ ವಲಸಿಗರಿಗೆ, ಜನರಿಗೆ ಕಲ್ಪಿಸಿದೆ ಎಂಬುದರ ಮೇಲೆ ಲೇಖಕಿ ಬೆಳಕು ಚೆಲ್ಲಿದ್ದಾರೆ. "ಇಲ್ಲಿ ಬಾವುಗೆ ಅನ್ನ ಹುಟ್ಟುತ್ತದೆ, ಕಾಕುಗೆ, ಕಾಕು ಸೊಸೆಗೆ................ ಸೌತ್ಯಾನ ಚೂರಿಯ ಅಲುಗಿನಲ್ಲಿ ಅನ್ನ ಹುಟ್ಟುತ್ತದೆ."[12] ಎಂಬ ಕಥೆಯೊಳಗಿನ ಸಾಲು ಮುಂಬೈನ ಕೊಳಗೇರಿ ಜನರ ಬದುಕಿನ ಬಗೆಯನ್ನು ಅನಾವರಣಗೊಳಿಸುತ್ತದೆ. ಅಲ್ಲಿಯ ಜನರಲ್ಲಿ ಮೌಲ್ಯಗಳನ್ನು ನಾಶಪಡಿಸುವ, ಮುಂಬೈಯನ್ನು ಬಿಟ್ಟು ಓಡುವ ಮಾರ್ಗಗಳಿಗೆ ತುತ್ತಾಗಿಸಿದೆ. ಮುಂಬೈಯಲ್ಲಿಯ ಜನರ ಬದುಕಿನ ಬಗ್ಗೆ ಹೊಂಚು ಕಥೆಯಲ್ಲಿ ಮುಂಬೈನ ಬಣ್ಣ ಬಣ್ಣದ ಲೋಕದ ಬಗ್ಗೆ ಕನಸುಕಟ್ಟಿಕೊಂಡು ಬಂದ ವಲಸಿಗರಿಗೆ ಮುಂಬೈ ಕಲ್ಪಿಸಿರುವ ಉದ್ಯೋಗಗಳತ್ತ ಲೇಖಕಿ ಗಮನಹರಿಸಿರುವು ವಿಶೇಷವಾಗಿದೆ.

ಲೇಖಕಿಯ ಎರಡು ಕಥೆಗಳಲ್ಲೂ ಕೊಳಗೇರಿ ಜನರ ಉದ್ಯೋಗ ಕೇಂದ್ರವಾಗಿದ್ದು, ಉದ್ಯೋಗಗಳು ಕೀಳು, ಇಂತಹ ಕೆಲಸಗಳಿಗಿಂತ ಹಳ್ಳಿಯ ರೈತಾಪಿ ಬದುಕು ಶ್ರೇಷ್ಠ ಎಂಬ ಧೋರಣೆ ಇದ್ದಂತಿದೆ. ಹೊಂಚು ಕಥೆಯ ಕೊನೆಯಲ್ಲಿ "ಈ ರಸ್ತೆಯ ಕೊನೆಯಲ್ಲಿ ತನಗಾಗಿ ಕಾಯುವ ಅನ್ನ ಹುಟ್ಟಿಸುವ ನನ್ನ ಭೂಮಿ ಇದೆ"[13] ಎನ್ನುತ್ತಲೇ ಓಡುತ್ತಿದ್ದ ಎಂಬ ಕಥೆಯ ಸಾಲು, ಹಾಗೂ ಆಕಾಶಬಾಣ ಕಥೆಯಲ್ಲಿ "ಏ ಕೈಸಾ ಬೊಂಬಯಿ? ಎಂತೆಂತಹ ದಂಧೆಗಳಪ್ಪಾ ನಾ ನಾಮ್ ನಾ ಡಂಗ್. ನಮ್ಮ ಹಳ್ಳಿಯ ರೈತ ಹುಡುಗರೇ ಮೇಲು"[14] ಎಂಬ ಕಥೆಯೊಳಗಿನ ಸಾಲುಗಳು ಲೇಖಕಿಯ ಆಪ್ತ ಸಲಹೆಯಂತಿವೆ. "ಓರ್ವ ಕೃಷಿಕನನ್ನು ಅಲ್ಪಕಾಲದಲ್ಲಿಯೇ ನಿರ್ವೀರ್ಯನನ್ನಾಗಿಸುವ ನಗರದ ಕ್ರೌರ್ಯ ಅಮಾನುಷತೆ ಇಲ್ಲಿ ನಮ್ಮನ್ನು ತಟ್ಟುತ್ತದೆ............... ನಗರದ ಅಮಾನುಷತೆಯು ಮನುಷ್ಯನನ್ನು ನಿರ್ವೀರ್ಯನನ್ನಾಗಿಸುವುದನ್ನು ಸಮರ್ಥಳಾಗಿ ಚಿತ್ರಿಸಿದ ಶ್ರೇಯಸ್ಸು ತುಳಸಿ ಅವರದ್ದು."[15] ಎಂಬ ಲೇಖಕಿ ಮಮತಾ ರಾವ್ ಅವರ ಮಾತುಗಳು ಕತೆಗಾರ್ತಿಯು ನಗರವನ್ನು ನೋಡುವ ದೃಷ್ಟಿಕೋನವನ್ನು ಅನಾವರಣಗೊಳಿಸುತ್ತದೆ. ಬಡಜನರ ಮೇಲೆ, ಅನಕ್ಷರಸ್ಥರನ್ನು ನಗರಗಳು ಬಳಸಿಕೊಳ್ಳುವ ರೀತಿಯ ಕಡೆ ಲೇಖಕಿ ಗಮನಹರಿಸಿದ್ದಾರೆ.

ಎರಡು ಕಥೆಗಳ ಶೀರ್ಷಿಕೆಯೆಡೆಗೆ ಗಮನಹರಿಸಿದರೆ, ಮುಂಬೈನ ಮತ್ತೊಂದು ಮುಖ ಅನಾವರಣಗೊಳ್ಳುತ್ತದೆ. ಹೊಂಚು ಪದಕ್ಕೆ ಮೋಸಗೊಳಿಸುವ, ಆಕ್ರಮಿಸು, ರಹಸ್ಯ ಕಾರ್ಯ ಎಂಬರ್ಥಗಳಿವೆ. ಈ ಕಥೆಯ ಕೇಂದ್ರ ಪಾತ್ರ ಪಾಂಡುನನ್ನು ಹೊಂಚು ಹಾಕಿ ಆತನ ಬದುಕನ್ನೇ ಮುಂಬೈ ಕಸಿದುಕೊಂಡಿದ್ದು. ಆತನನ್ನು ಮರಳಿ ಆತನ ಮೂಲ ಕಸುಬಿಗೆ ನೂಕುವ ಚಿತ್ರಣ ಹೊಂಚು ಕಥೆಯದ್ದು. ಹಾಗೆ ಆಕಾಶಬಾಣ ಪದವು ಕ್ಷಣಿಕ ಸಂತೋಷ, ಸುಖವನ್ನು, ದೂರದ ಆಸೆ ಎಂಬರ್ಥಗಳನ್ನು ಒಳಗೊಂಡಿದ್ದು ಈ ಕಥೆಯ ಕೇಂದ್ರ ಪಾತ್ರ ಬಚ್ಚುನ ಆಸೆ, ಕನಸುಗಳೆಲ್ಲವೂ ಹಾಗೆ ಉಳಿದು, ಆತನ ಕಸುಬು ಆತನಿಗೆ ಕಾಯಂ ಆದದ್ದು ಕಥಾ ಹಂದರವಾಗಿದೆ.

ಲೇಖಕಿ ಈ ಕೊಳಗೇರಿ ಜನರ ಬದುಕನ್ನು ನೋಡಿರುವ ಬಗೆ ಬಹು ವಿಶಿಷ್ಟವಾಗಿದೆ. ಅಲ್ಲಿಯ ಜನರ ಜೀವನ ಪ್ರೀತಿ ಅಪಾರವಾಗಿದ್ದು, ಯಾವುದಾದರೂ ಒಂದು ಕೆಲಸವನ್ನಾದರೂ ಮಾಡಿ ಜೀವನ ನಿರ್ವಹಿಸುತ್ತಾರೆ. ಸಹ್ಯ – ಅಸಹ್ಯ, ನೈತಿಕ – ಅನೈತಿಕ, ಗೌರವ – ಅಗೌರವ ಇವುಗಳ ಪರಿಧಿ ಆಚೆಗಿನ ಬದುಕು ಈ ಕೊಳಗೇರಿ ಜನರದ್ದು. ಅಲ್ಲಿಯ ಜನರಿಗೆ ದಿನದ ತುತ್ತು ಅನ್ನ ಮುಖ್ಯ. ಜೀವಿಸುವುದು ಅಲ್ಲಿ ಜನರ ಮೊದಲ ಆದ್ಯತೆ. ಇಂತಹ ಅನಿವಾರ್ಯತೆಯ ಅಂಚಿಗೆ ಜನರನ್ನು ತಂದಿರುವುದು ಮುಂಬೈ ಮತ್ತು ಮುಂಬೈನ ಪರಿಸರ. ಇಂತಹ ಸ್ಥಿತಿಯಲ್ಲೂ ಕೊಳಗೇರಿ ಜನರ ಬದುಕುವ ಕಲೆ, ಅವರು ಬದುಕು ನಿರ್ಮಿಸಿಕೊಳ್ಳುವ ಕೌಶಲದ ಮೇಲೆ ಬೆಳಕು ಚೆಲ್ಲಿದ್ದಾರೆ. "ತುಳಸಿ ಅವರ ಕಥೆಗಳಲ್ಲಿ ಒತ್ತು ಇರುವುದು ಬಡವರ ಕಷ್ಟಗಳ ಮೇಲಲ್ಲ, ಬಡವರ ಬದುಕುವ ಶಕ್ತಿಯ ಮೇಲೆ ಹೆಚ್ಚಿನ ಅವಧಾರಣೆ ಕಂಡುಬರುತ್ತದೆ."[16] ಎಂಬ ಟಿ.ಪಿ. ಅಶೋಕ್ ಅವರ ಮಾತುಗಳು ಲೇಖಕಿ ಕೊಳಗೇರಿಯನ್ನು ನೋಡುವ ನೋಟ ವಿಶಿಷ್ಟವೂ, ಭಿನ್ನವು ಆಗಿದೆ ಎಂಬುದನ್ನು ತಿಳಿಸುತ್ತದೆ.

ಎರಡು ಕಥೆಗಳಲ್ಲಿ ಮುಂಬೈನ ಕೊಳಗೇರಿ ಜನರು ಕೈಗೊಳ್ಳುವ ಉದ್ಯೋಗಗಳು ನಾಗರಿಕ ಸಮಾಜ ಅದನ್ನು ಕೀಳು, ಅಸ್ಪೃಶ್ಯ ಎಂದು ಗ್ರಹಿಸಿರುವ ಕೆಲಸಗಳು. ಇಂತಹ ಕೆಲವು ಉದ್ಯೋಗಗಳ ಗ್ರಹಿಕೆಯಿಂದ

ಪೂರ್ಣ ಮುಂಬೈಯನ್ನು ಅರ್ಥೈಸಲಾಗುವುದಿಲ್ಲ. ಕೆಲವೆ ಕೆಲವು ವಿಚಾರವನ್ನು ಕೇಂದ್ರೀಕರಿಸಿ ಮುಂಬೈ ಕುರಿತ ಪ್ರಜ್ಞೆಯನ್ನು ಕಟ್ಟಲು ಸಾದ್ಯವಾಗುವುದಿಲ್ಲ. ಆಯ್ದ ವಿಚಾರಗಳು ಸತ್ಯವಾಗಿದ್ದರು, ಅವಷ್ಟೇ ಮುಂಬೈಯಲ್ಲ. ಅದರ ಆಚೆಗಿನ ಪ್ರಪಂಚವು ಇದೆ. ಮುಂಬೈಗೆ ವಲಸೆ ಬಂದ ಎಷ್ಟೋ ಜನರು ನಿರ್ಮಿಸಿದ ಧಾರವಿ ಸ್ಲಂ. ಈ ಸ್ಲಂ ಮುಂಬೈನ ಕೆಲವು ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಬಲ್ಲದೆ ಹೊರತು ಇಡೀ ಸಮಗ್ರ ಮುಂಬೈ ಮೇಲಲ್ಲ. ಧಾರಾವಿ ಒಳಗೆ ಅರ್ಥಪೂರ್ಣವೂ, ನಾಗರಿಕ ಸಮಾಜ ಒಪ್ಪಿದಂತಹ ನೂರಾರು ಉದ್ಯೋಗಗಳಲ್ಲಿ ಅಲ್ಲಿಯ ಲಕ್ಷಾಂತರ ಜನ ತೊಡಗಿಕೊಂಡು ಬದುಕು ಕಟ್ಟಿಕೊಂಡಿದ್ದಾರೆ. ಕೊಳಗೇರಿಗಳಲ್ಲೂ ಪ್ರೀತಿ, ಸ್ನೇಹದಂತಹ ಜೀವಪರ ಮೌಲ್ಯಗಳಿವೆ. "ಅದಕ್ಕೆ ಈ ಮಿಡಿತ ಹಂಗುಗಳ ಮಾನದಂಡಗಳ ವ್ಯಾಕರಣಗಳ ಕ್ಷುದ್ರತೆಗಳ ಆಚೆಗೂ ನಮ್ಮನ್ನು ಸ್ವೀಕರಿಸುತ್ತದೆ, ಪ್ರೀತಿಸುತ್ತದೆ ಮತ್ತು ನಮ್ಮೊಳಗೆ ನಮ್ಮನ್ನು ಬಿಡುಗಡೆಗೊಳಿಸುತ್ತದೆ ಘನತೆಯೆಡೆಗೆ"[17] ಎಂಬ ಜಯಂತ ಕಾಯ್ಕಿಣಿ ಅವರ ಮಾತುಗಳು ಮುಂಬೈ ಜನರ ಬದುಕುವ ಕಲೆಯನ್ನು , ಅವರ ಜೀವನ ಪ್ರೀತಿಯನ್ನು ತೋರಿಸುತ್ತದೆ.

ರೈಲಿನ ಪ್ರಯಾಣ, ವಸತಿ ಸಮಸ್ಯೆ, ಅಪರಾಧಿ ಭಾವನೆ, ವಿಷಾದತೆ, ಎಲ್ಲವೂ ಅದ್ಭುತವಾದ ರೀತಿಯಲ್ಲಿ ತುಳಸಿಯವರ ಕಥೆಗಳಲ್ಲಿ ಅಡಕವಾಗಿವೆ. ಲೇಖಕಿ ನಗರ ಜೀವನವನ್ನು ಅದರ ಎಲ್ಲಾ ಸಂಕೀರ್ಣತೆಗಳನ್ನು ತಮ್ಮ ಕಥಾ ವಸ್ತುವನ್ನಾಗಿಸುವ ಶೈಲಿ ಮಹತ್ವವಾಗಿದೆ. ಲೇಖಕಿ ನಗರವನ್ನು ಕುರಿತ ಗ್ರಹಿಕೆ ಬಿನ್ನವು, ಸೂಕ್ಷ್ಮವೂ ಆಗಿದೆ ಎಂಬುದನ್ನು ಅವರ ಹೊಂಚು ಮತ್ತು ಆಕಾಶಬಾಣ ಕತೆಗಳ ಅಧ್ಯಯನದಿಂದ ತಿಳಿಯಬಹುದೆ.

**ಕೊನೆ ಟಿಪ್ಪಣಿಗಳು**

1. ಜಯಂತ ಕಾಯ್ಕಿಣಿ. *ಶಬ್ದತೀರ.* ಪುಟ. 20
2. ತುಳಸಿ ವೇಣುಗೋಪಾಲ್. ಸಮಗ್ರ ಕಥೆಗಳು. ಪುಟ. 139
3. ಆತೀಶ್ ಬಾಜಿ – ಮದುವೆ, ಸಮಾರಂಭಗಳಲ್ಲಿ ಪಟಾಕಿ ಮತ್ತು ಆಕಾಶಬಾಣಗಳನ್ನು ಬಿಡುವ ಒಂದು ಮನರಂಜನೆಯ ಕಾರ್ಯಕ್ರಮ
4. ತುಳಸಿ ವೇಣುಗೋಪಾಲ್. ಸಮಗ್ರ ಕಥೆಗಳು. ಪುಟ. 133
5. ಅದೇ. ಪುಟ. 191
6. ಅದೇ. ಪುಟ. 196
7. ಅದೇ. ಪುಟ. 197
8. ಅದೇ. ಪುಟ. 138
9. ಅದೇ. ಪುಟ. 194
10. ಅದೇ. ಪುಟ. 296
11. ಅದೇ. ಪುಟ. 128
12. ಅದೇ. ಪುಟ. 139
13. ಅದೇ. ಪುಟ. 139

14. ಅದೇ. ಪುಟ. 194
15. ಮಮತಾ ರಾವ್. *ಮುಂಬೈ ಕನ್ನಡ ಕಥಾ ಸಾಹಿತ್ಯ*. ಪುಟ. 246
16. ತುಳಸಿ ವೇಣುಗೋಪಾಲ್. ಸಮಗ್ರ ಕತೆಗಳು. ಪುಟ. 296
17. ಜಯಂತ ಕಾಯ್ಕಿಣಿ. *ಶಬ್ದತೀರ.* ಪುಟ. 26

**ಪರಾಮರ್ಶನ ಗ್ರಂಥಗಳು**


- ಉಪಾಧ್ಯ, ಜಿ.ಎನ್. (2020). *ಮುಂಬೈ ಕನ್ನಡ ಸಾಹಿತ್ಯ ಚರಿತ್ರೆ.* ಸಂ.1. ಸ್ನೇಹ ಎಂಟರ್ಪ್ರೈಸಸ್,
- ಜಯಂತ ಕಾಯ್ಕಿಣಿ. (2020). *ಶಬ್ದತೀರ.* (ನಾಲ್ಕನೇ ಮುದ್ರಣ). ಅಂಕಿತ ಪುಸ್ತಕ.
- ತುಳಸಿ ವೇಣುಗೋಪಾಲ್. (2023). *ಸಮಗ್ರ ಕಥೆಗಳು.* (ಮೊದಲ ಮುದ್ರಣ). ಪ್ರೀಸಮ್ ಬುಕ್ಸ್ ಪ್ರೈ.ಲಿ.
- ಮಮತಾ ರಾವ್. (2013). ಮುಂಬೈ ಕನ್ನಡ ಕಥಾ ಸಾಹಿತ್ಯ. ಕನ್ನಡ ಅಧ್ಯಯನ ವಿಭಾಗ, ಮುಂಬೈ ವಿಶ್ವವಿದ್ಯಾಲಯ,